ತ್ತದೆಯೇ? ಅದಕ್ಕೆ ಒಂದು ಪ್ರೊಸೀಜರ್ ಬೇಡವೇ ? ಸುಮ್ಮನೇ ಇದರ ಮೇಲೆ ಚರ್ಚೆ ಮಾಡಿದರೆ ಹೇಗೆ ?

ಶ್ರೀ ಬಿ. ಪುಟ್ಟಸ್ವಾಮಯ್ಯ :— ಮೂನ್ಯ ಅಧ್ಯಕ್ಷಣಿಯವರೇ ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿಗೆ ಮತ್ತು ಲ್ಯಾಂಡ್ ಟ್ರಬ್ಯೂನಲ್‌ಗೆ ವಿರೋಧ ಪಕ್ಷದ ಶಾಸಕರನ್ನು ಹಾಕಿಲ್ಲ ಎಂದು ಹೇಳಿದಾಗ ಮೂನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದರು. ಅದು ಈ ತಹಲ್‌ವರೆಗೂ ಕಾರ್ಯಗತ ಆಗಿಲ್ಲ. ಆದ್ದರಿಂದ ಮೂನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಖಚಿತವಾಗಿ ಸರಕಾರದ ಅಭಿಪ್ರಾಯ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್ :— ಶ್ರೀಮಾನ್ ಪುಟ್ಟಸ್ವಾಮಯ್ಯನವರು ತಮಗೆ ಒಂದಿರತಕ್ಕ ಕಾಗದಗಳನ್ನು ಪಿಜನ್‌ಹೋಲ್‌ನಲ್ಲಿ ನೋಡಿಲ್ಲ. ಸರ್ಕಾರದ ಆರ್ಡರನ್ನು ಆ ಬಗ್ಗೆ ಕಳುಹಿಸಿದೆ. ದಯಮಾಡಿ ಅವರು ನೋಡಬೇಕು.

ಶ್ರೀ ಪುಟ್ಟಸ್ವಾಮಯ್ಯ :— ಮೂನ್ಯ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ ಬಂದ ಮೇಲೆ ಪರಿವರ್ತನೆಯಾಗಿದ್ದಾರೆ. ತುಂಬಾ ಸಂತೋಷ ಪಡಬೇಕಾದ ಅಂಶ.

Bhapat Report on Sandur Murder Case

ಶ್ರೀ ಕಾಗೋಡು ತಿಮ್ಮಪ್ಪ :....ಸೊಂಡೂರಿನ ಪ್ರಕರಣ ಬಗ್ಗೆ ಬಾಪಟ್ ಕಮಿಷನ್ನಿನವರು ಕೊಟ್ಟಿರತಕ್ಕ ವರದಿಯ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ಹೇಳಿಕೆ ಕೊಡುತ್ತೇವೆ ಎಂದು ಶ್ರೀಮಾನ್ ಚನ್ನಬಸಪ್ಪನವರು ಹೇಳಿದ್ದರು.

DISPUTES ON LANDLORDS FREQUENT MURDERS

ಶ್ರೀ ಕೋಣಂದೂರು ಲಿಂಗಪ್ಪ :—ಶಿವಮೊಗ್ಗದಲ್ಲಿ ಒಬ್ಬರು ಮೂಲೀಕರು ಗೇಣಿದಾರರನ್ನು ಭೂಮಿಯಿಂದ ಉಚ್ಚಾಟನೆ ಮಾಡಿದ್ದಾರೆ. ಅದೇ ರೀತಿ ಶೃಂಗೇರಿಯಲ್ಲಿ ಒಬ್ಬರು ಗೇಣಿದಾರರನ್ನು ಉಚ್ಚಾಟನೆ ಮಾಡಿದ್ದಾರೆ. ಇದೇ ರೀತಿ ಬೇಕಾದಷ್ಟು ರಿಪೋರ್ಟ್‌ಗಳು ಬರುತ್ತಿವೆ. ಆದ್ದರಿಂದ ಸರ್ಕಾರದವರೂ ಗೇಣಿದಾರರಿಗೆ ರಕ್ಷಣೆ ಕೊಡುವುದರ ಬಗ್ಗೆ ಆಸಕ್ತಿಯನ್ನು ವಹಿಸಬೇಕು.